ಶಾರೀರಕ ಶಿಕ್ಷಕರ ಬಗ್ಗೆ

೩೨೭ (ಟಿ೮೯) ಶ್ರೀ ಬಿ. ರಾಮನಾಥರೈ (ಬಂಟ್ವಾಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ನಮ್ಮ ರಾಜ್ಯದ ಪ್ರೌಢ ಶಾಲೆಗಳಲ್ಲಿರುವ ಶಾರೀರಕ ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು ?

ಆ) ಸಧ್ಯ ಖಾಲಿ ಇರುವ ಶಾರೀರಕ ಶಿಕ್ಷಕರ ಹುದ್ದೆ ಸಂಖ್ಯೆ ಎಷ್ಟು ?

ಇ) ಖಾಲಿ ಇರುವ ಶಾರೀರಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).

ಅ) ೧೩೭೮

ಆ) ೧೭೯

ಇ) ಇದೆ. ವಿಭಾಗೀಯ ನೇಮಕಾತಿ ಸಮಿತಿಯ ಮೂಲಕ ಕ್ರಮ ಜರುಗಿಸಲಾಗುತ್ತಿದೆ.

ಬೈಂದೂರು ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ರಚನೆ

೩೨೮ (ಟಿ೧೧) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೈಂದೂರಿನ ಸರಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ರಚನೆಗೆ ಶಿಕ್ಷಣ ಸಚಿವರು ಕೆಲವು ತಿಂಗಳ ಹಿಂದೆ, ಶಿಲಾನ್ಯಾಸ ಮಾಡಿದ್ದು, ಕಟ್ಟಡ ರಚನೆಯ ಕಾಮಗಾರಿ ಇನ್ನೂ ಆರಂಭವಾಗದಿರಲು ಕಾರಣವೇನು ?

ಆ) ೧೯೮೮–೮೯ನೇ ವರ್ಷದಲ್ಲಿ ಈ ಸಲುವಾಗಿ ಎಷ್ಟು ಹಣವನ್ನೊದಗಿಸಲಾಗಿದೆ ? ಹಾಗೂ ಇದರಲ್ಲಿ ಎಷ್ಟು ವ್ಯಯವಾಗಿದೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).

ಅ) ದಿನಾಂಕ ೧೭–೧೧–೧೯೮೮ರ ಸಂಖ್ಯೆ ; ಇಡಿ ೧೧೭ ಬಿಜಿಓ ೮೮ರ ಸರ್ಕಾರಿ ಆದೇಶದಲ್ಲಿ, ಕಟ್ಟಡದ ಅಂದಾಜಿನ ೧/೩ ಭಾಗ ಅನುದಾನದೊಂದಿಗೆ ಕಟ್ಟಡದ ಕೆಲಸ ಪ್ರಾರಂಭಿಸಲು ಆಡಳಿತ ಅನುಮೋದನೆ ನೀಡಲಾಗಿದೆ. ದಿನಾಂಕ ೯–೧೨–೧೯೮೮ರಂದು ತಾಂತ್ರಿಕ ಆಡಳಿತ ಮಂಜೂರಾತಿಗಾಗಿ ಮತ್ತು ನಕ್ಷೆ ಮತ್ತು ಅಂದಾಜು ಪಟ್ಟಿಯ ಮೇಲೂ ಸಹಿಗಾಗಿ ಲೋಕೋಪಯೋಗಿ ಇಲಾಖೆಯ ದಕ್ಷಿಣದ ಮುಖ್ಯ ಅಭಿಯಂತರರನ್ನು ದಿನಾಂಕ ೯–೧೨–೧೯೮೮ರಂದು ಕೋರಲಾಗಿದೆ.

ಆ) ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಈ ಬಾಬಿಗಾಗಿ ರೂಪಾಯಿ ೪.೩೬ ಲಕ್ಷ ಹಣವನ್ನೊದಗಿಸಲಾಗಿದೆ. ಕಟ್ಟಡದ ಕೆಲಸ ಇನ್ನೂ ಪ್ರಾರಂಭಿಸಬೇಕಾಗಿರುವುದರಿಂದ ಈ ಹಣದಲ್ಲಿ ಸ್ವಲ್ಪವೂ ವ್ಯಯವಾಗಿರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಪೂರ್ಣ ಪ್ರಮಾಣದ ಮತ್ತು ಜೂನಿಯರ್ ಕಾಲೇಜುಗಳ ಬಗ್ಗೆ

೩೨೯ (ಟಿ೩) ಶ್ರೀ ವಸಂತ ವಿ. ಸಾಲಿಯಾನ(ಕಾಪು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಪೂರ್ಣ ಪ್ರಮಾಣದ ಮತ್ತು ಜೂನಿಯರ್ ಕಾಲೇಜುಗಳಿವೆ ?